# ಭೇಟಿ

**(ಕನ್ನಡ ಚಲನಚಿತ್ರ)**

**ಕಥಾಸಾರಾಂಶ:**

ಪುರುಷಕೇಂದ್ರಿತ ಸಮಾಜದಲ್ಲಿ ತಪ್ಪೇ ಅಲ್ಲವೆಂದು ಸಹಜವಾಗಿ ಸ್ವೀಕಾರಗೊಂಡಿರುವ ಮಕ್ಕಳ ಲಿಂಗ ಅಸಮಾನತೆಯನ್ನು ವಿಡಂಬಿಸುವ ಚಲನಚಿತ್ರ 'ಭೇಟಿ'.

ಕರಾವಳಿಯ ಪುಟ್ಟ ಹಳ್ಳಿ ಮುತ್ತುಪ್ಪಾಡಿಯಲ್ಲಿ ದರ್ಜಿ 'ಮೋನಾಕ'ನದ್ದು ಕೆಳವರ್ಗದ ಬ್ಯಾರಿ ಕುಟುಂಬ. ಒಬ್ಬಳೇ ಮಗಳು ಜುಲೇಖಾ, ಹುಟ್ಟುಮೂಕಿ. ಇದೇ ಆಕೆಯ 'ಮದುವೆ'ಗೆ ಬಹುದೊಡ್ಡ ಅಡ್ಡಿ. ಇತ್ತ, ನಾಲ್ವರು ಸಹೋದರಿಯರಿಗೆ ತನ್ನೊಬ್ಬನ ಸಂಪಾದನೆಯಿಂದಲೇ ನಿಖಾ ಮಾಡಿಸುವಲ್ಲಿ ಸೋತುಹೋಗಿದ್ದ ಯುವಕ ಸುಲೈಮಾನ್, ದುಬೈಗೆ ಹಾರಲು ವೀಸಾ ಕೊಡಿಸುವ ಮಾವನ ಹುಡುಕಾಟದಲ್ಲಿರುವ ಗಿರಾಕಿ. ಈ ಪರಸ್ಪರ ಅನಿವಾರ್ಯದ ಹೊಂದಾಣಿಕೆ ಸುಲೈಮಾನ್ ಮತ್ತು ಜುಲೇಕಾಳ ನಿಖಾದಲ್ಲಿ ಮುಕ್ತಾಯವಾಗುತ್ತದೆ. ಸುಲೈಮಾನ್‌ಗೆ ವೀಸಾ ಸಿಗುವಷ್ಟರಲ್ಲಿ, ಜುಲೇಖಾ ನಾಲ್ಕು ತಿಂಗಳ ಗರ್ಭಿಣಿ. ತನಗೆ ಗಂಡು ಮಗುವೇ ಬೇಕು ಎಂದು ಜುಲೇಖಾಳಿಂದ ಮಾತು ಪಡೆದ ಸುಲೈಮಾನ್ ದುಬೈಗೆ ಹಾರುತ್ತಾನೆ.

ಆದರೆ, ಜುಲೇಖಾ ಹೆಣ್ಣು ಮಗು ಹೆರುತ್ತಾಳೆ! ಅಳಿಯ 'ಹೆಣ್ಣು' ಮಗುವಿನ ಸುದ್ದಿ ತಿಳಿದು ತಲ್ಲಾಖ್ ಕೊಟ್ಟರೆ ಗತಿಯೇನು? ಈ ಅಳುಕಿನಿಂದ ಫೋನ್‌ನಲ್ಲಿ ಮಾತಾಡುವಾಗ ಮಗುವಿನ ಲಿಂಗದ ವಿಚಾರ ಹಾದಿತಪ್ಪಿ ತನಗೆ 'ಗಂಡು' ಮಗು ಹುಟ್ಟಿದೆ ಎಂದು ಸುಲೈಮಾನ್ ಭಾವಿಸುವಂತಾಗುತ್ತದೆ. ಆತ ಮಗನಿಗೆ ಸೂಚಿಸುವ ಹೆಸರು 'ಸಲ್ಮಾನ್'; ಇವರು ಇಟ್ಟದ್ದು 'ಸಲ್ಮಾ' ಎಂದು!

ಇದೀಗ ಐದು ವರ್ಷಗಳ ನಂತರ ಸುಲೈಮಾನ್ ತನ್ನ ಗಂಡು ಮಗುವಿನ 'ಭೇಟಿ'ಗೆಂದು ವಿದೇಶದಿಂದ ಬರುತ್ತಿದ್ದಾನೆ. ಮಗುವಿನ ಅಪ್ರಿಯ ಸತ್ಯ ಬಯಲಾಗಿ ಮಗಳ ಬಾಳು ಎಲ್ಲಿ ಹಾಳಾಗುವುದೋ ಎಂಬ ದಿಗಿಲು ಮೋನಾಕನದ್ದು. ಈ ಕುಟುಂಬದ ಸಂಕಟ ಪರಿಹಾರಕ್ಕೆಂದು ಜಾತಿ ಮತ ಭೇದವಿಲ್ಲದೆ ಊರವರೆಲ್ಲ ಒಗ್ಗಟ್ಟಾಗುತ್ತಾರೆ. ಅಳಿಯ ಬರುತ್ತಿರುವುದು ವಾರದ ಮಟ್ಟಿಗೆ ಎಂದು ತಿಳಿದಾಗ, ಹೆಣ್ಣುಮಗು 'ಸಲ್ಮಾ'ಳನ್ನು ತಾತ್ಕಾಲಿಕವಾಗಿ ಗಂಡುಮಗು 'ಸಲ್ಮಾನ್' ಮಾಡುವ ಪ್ಲಾನ್ ಮಾಡುತ್ತಾರೆ. ವಿಮಾನದಲ್ಲಿ ಹೋಗುತ್ತೇನೆ ಎಂಬ ಒಂದೇ ಒಂದು ಆಸೆಯಿಂದ ಪುಟ್ಟ ಸಲ್ಮಾ ಗಂಡಾಗಿ ವೇಷಾಂತರಗೊಳ್ಳಲು ಸಮ್ಮತಿಸುತ್ತಾಳೆ. ಸುಲೈಮಾನ್ ಬರುತ್ತಾನೆ. ಗಂಡು ಮಗುವನ್ನು ಕಂಡು ಸಂಭ್ರಮಿಸುತ್ತಾನೆ. ಎಲ್ಲರೂ ನಿರಾಳರಾಗುತ್ತಾರೆ.

ಒಂದೆರಡು ದಿನದ ನಂತರ, ಸುಲೈಮಾನನ 'ಭೇಟಿ' ಕೇವಲ ಒಂದು ವಾರದ ಅವಧಿಯದ್ದಲ್ಲ; ಹೆಂಡತಿ ಮತ್ತು ಮಗುವನ್ನು ದುಬೈಗೆ ಕರೆದುಕೊಂಡು ಹೋಗಲು ವೀಸಾ ಹಿಡಿದು ಬಂದಿದ್ದಾನೆ ಎಂಬ ಸತ್ಯ ಬಿಚ್ಚಿಕೊಂಡಾಗ, ಕತೆ ಹೊಸ ಬಿಕ್ಕಟ್ಟಿಗೆ ನಾಂದಿಯಾಗುತ್ತದೆ. ಒಂದು ಸುಳ್ಳನ್ನು ಸತ್ಯವೆಂದು ನಂಬಿಸುವಲ್ಲಿ ಹತ್ತು ಸುಳ್ಳುಗಳ ಸರಪಳಿಯನ್ನು ಜೋಡಿಸುವ ಅನಿವಾರ್ಯತೆ ಎದುರಾಗುತ್ತದೆ. ಗಂಡನಿಗೆ ಮೋಸ ಮಾಡಲು ಹೊರಟ ಹೆತ್ತವರ ಅನಿವಾರ್ಯದ ನಾಟಕಕ್ಕೆ, ಮೂಕಸಾಕ್ಷಿಯಾಗಿದ್ದ ಮೂಕಿ ಜುಲೇಖಾ, ಸುಳ್ಳಿನಾಟದ ನಾಯಕಿ ತಾನಲ್ಲ ಎಂಬುದನ್ನು ನಿವೇದಿಸಿಕೊಳ್ಳಲೂ ಆಗದೆ ಪರಿತಪಿಸುತ್ತಾಳೆ. ಕೊನೆಗೊಮ್ಮೆ ಸತ್ಯ ಮುಚ್ಚಿಡಲು ಸಾಧ್ಯವೇ ಆಗದ ಸಾಂಪ್ರದಾಯಿಕ ಸಂದರ್ಭವೊಂದು ಎಲ್ಲರನ್ನೂ ಬೆಚ್ಚಿಬೀಳಿಸುತ್ತದೆ.

**ಆಗ,** ಈ ಕತೆಗೆ ನಾಯಕಿಯೂ, ನಾಯಕನೂ ಆಗಿದ್ದ ಹೆಣ್ಣು ಮಗು ಸಲ್ಮಾ ಅಪ್ಪನನ್ನು ಗೆಲ್ಲುವ 'ಹೆಣ್ಣು' ಕತೆ ಈ 'ಭೇಟಿ'

------